**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.65-2013** **ಡಿ. ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶೇಖರಪ್ಪ<br>ದೇವನೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 05-12-2024. |

**<u>ಪಾಟೀ ಸವಾಲು: ವಾದಿಗಳ ಪರ ಶ್ರೀ ಹೆಚ್.ಎಂ ವಕೀಲರಿಂದ:</u>**

ನಮ್ಮ ತಂದೆ ಸಿದ್ಧವೀರಪ್ಪ ರವರನ್ನು ಸಿದ್ಧವೀರಯ್ಯ ಎಂದು ಕರೆಯುತ್ತಾರೆ ಎಂದರೆ ಸರಿ. ನಮ್ಮ ತಂದೆಯವರಿಗೆ ಒಟ್ಟು 6 ಜನ ಮಕ್ಕಳು ಎಂದರೆ ಸರಿ. ಅವರುಗಳ ಪೈಕಿ 4 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ನನ್ನ ಸಹೋದರರ ಪೈಕಿ ನಂಜಪ್ಪ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾವೆಲ್ಲ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ.

2. ನಾವು 1970 ರಲ್ಲಿ ಮಾಡಿಕೊಂಡು ಬಾಯಿ ಮಾತಿನ ವಿಭಾಗದ ಆಧಾರದ ಮೇರೆಗೆ ನಮ್ಮಗಳ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿರುವುದಿಲ್ಲ. ಮೌಖಿಕ ವಿಭಾಗ ಮಾಡಿಕೊಂಡ ನಂತರ ನಮ್ಮಗಳ ಹೆಸರಿಗೆ ಪ್ರತ್ಯೇಕ ಖಾತೆ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ.

3. ನಿಡಿ-2 ದಿ.07-11-1974 ರ ಕ್ರಯ ಪತ್ರವಾಗುವ ಸಮಯ ನಾನು ಇನ್ನೂ ಅಪ್ರಾಪ್ತ ವಯಸ್ಕ ಎಂದರೆ ಸರಿ. ಸದರಿ ಕ್ರಯ ಪತ್ರದ ಆಧಾರದ ಮೇರೆಗೆ 1 ಎಕರೆ 14 ಗುಂಟೆ ಸ್ವತ್ತನ್ನು ನನ್ನ ಅಣ್ಣ ನಂಜಪ್ಪನವರಿಂದ ಕ್ರಯಕ್ಕೆ ಪಡೆಯಲಾಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲವೂ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನಿಡಿ-2 ರ ಕ್ರಯ ಪತ್ರದ ಆಧಾರದ ಮೇರೆಗೆ ನಾನು ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ನಂಜಪ್ಪ ರವರ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿ. ಕೇವಲ ನೆಪ್ಪಕ್ಕೆ ಮಾತ್ರ ಬರೆಸಿಕೊಳ್ಳಲಾಗಿರುತ್ತದೆ ಎಂದರೆ ಸರಿ. ನನ್ನ ಹೆಸರಿಗೆ ನಂಜಪ್ಪನವರಿಂದ ಆಗಿರುವ ಕ್ರಯ ಪತ್ರವು ನಾಮಾಂಕಿತ ಕ್ರಯ ಪತ್ರವಾಗಿರುವುದರಿಂದ ಸದರಿ ಕ್ರಯ ಪತ್ರವು ವಾದಿಗಳ ಹಕ್ಕನ್ನು ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಮನೆ ಸ್ವತ್ತಿಗೆ ಸಂಬಂಧಿಸಿದಂತೆ ಆಸ್ತಿ ವಿವರ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ.

4. ನಿಡಿ-8 ರ ಸರ್ವೇ ನಂ.392/2 ಖಾತೆಯೂ ಸಿದ್ಧಯ್ಯ, ಶಿವಣ್ಣ ಮತ್ತು ನನ್ನ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ಸರ್ವೇ ನಂ.392/2 ರ ಸ್ವತ್ತು ಸಹ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ 1 ನೇ ಐಟಂ ಸ್ವತ್ತು ಸಹ ನನ್ನ ಮತ್ತು ಶಿವಣ್ಣ ರವರ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ.4 ರ ಸ್ವತ್ತು ನನ್ನ ತಂದೆ ದೇವನೂರು ಸಿದ್ಧೂರಪ್ಪನವರ ಹೆಸರಿನಲ್ಲಿ

ಖಾತೆ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಸಹ ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**